'ಹೇಳಿದಷ್ಟು ಕೇಳು. ನೀನು ಸುಧಾಮನ ಒಕ್ಕಲಿನ ಥರ ಹೋದ್ರೆ ಅವರು ಕಣ್ಣಲ್ಲೇ ನಮ್ಮ ಯೋಗ್ತಿ ಅರ್ಥ ಮಾಡ್ಕಂಬಿಡಲ್ವಾ?'

ಅತ್ತಿಗೆಯ ಕಣ್ಣುಗಳಲ್ಲಿ ನೀರು ಜಿನುಗಿದ್ದನ್ನು ರಾಮಚಂದ್ರ ಗಮನಿಸಿದ್ದ.

'ಅತೀ ಮಾಡ್ಬೇಡ ಕಣೇ ನೀನು. ಯಾರೋ ನಮ್ಮನ್ನ ಮೆಚ್ಬೇಕು ಅಂತ ವೇಷ ಕಟ್ಕೋಕಾಗುತ್ತಾ?' ಹೇಳಿದ್ದ. ಎಲ್ಲಾ ತುದಿನಾಲಿಗೆಯ ಮಾತು. 'ಅವನು ಕಟ್ಟಿರಲಿಲ್ಲವೇ ವೇಷ? ಗುಟ್ಟಾಗಿ ಪೌಡರು ಡಬ್ಬಿ ಖರೀದಿಸಿ ತಂದಿಟ್ಟುಕೊಂಡಿದ್ದು ಯಾರು?' ಅಪರೂಪಕ್ಕೆ ಪೇಟೆಗೆ ಹೊರಟಾಗ ಮಾತ್ರ ಪ್ಯಾಂಟು ಏರಿಸಿ ಕೊಳ್ಳುತ್ತಿದ್ದವನು ಉದ್ದೇಶಪೂರ್ವಕವಾಗಿ ಆ ದಿರಿಸನ್ನು ಆಯ್ಕೆ ಮಾಡಿ ಕೊಂಡಿದ್ದ. ಪೇಟೆ ಜನಕ್ಕಿಂತ ತಾನೇನು ಕಮ್ಮಿ ಇಲ್ಲ ಎಂದು ತೋರಿಸಿ ಕೊಳ್ಳುವ ಚಪಲ. ವಿದ್ಯೆ ತಲೆಗೆ ಹತ್ತಿದ್ದರೆ ತಾನೂ ಒಂದು ನೌಕರಿ ಗಿಟ್ಟಿಸಿಕೊಂಡು ಪೇಟೆಯಲ್ಲಿ ಗಮ್ಮತ್ತಾಗಿರಬಹುದಿತ್ತು. ಮನೆ ಕಡೆ ನೋಡಿಕೊಳ್ಳಲು ಒಬ್ಬ ಇದ್ದಾನೆ. ಇವನು ತನ್ನ ದಾರಿ ಕಂಡುಕೊಳ್ಳಲಿ ಎಂದು ಅಮ್ಮನಿಗೂ ಆಸೆ ಇದ್ದಿರಬಹುದು. ಹಣೇಬರ ಯಾರಪ್ಪನ ಮನೆಯದು? ಅಣ್ಣ, ತಮ್ಮ ಇಬ್ಬರೂ ಎಸ್ಸೆಲ್ಸಿಯಲ್ಲಿ ಫೇಲು. ಅಲ್ಲಿಗೆ ವಿದ್ಯೆ ಕೈದು. ಯಾಕೋ ಮತ್ತೆ ಪರೀಕ್ಷೆ ಕಟ್ಟಬೇಕು ಅನಿಸಿರಲಿಲ್ಲ. ಅಮ್ಮ ಒತ್ತಾಯ ಮಾಡಿರಲಿಲ್ಲ. ಹರೆಯದಲ್ಲೇ ಗಂಡನನ್ನು ಕಳೆದುಕೊಂಡು ಇದ್ದ ಇಬ್ಬರು ಮಕ್ಕಳನ್ನು ಎರಡು ಕಣ್ಣುಗಳಂತೆ ಜೋಪಾನ ಮಾಡಿದವಳಿಗೆ ಅವರನ್ನು ದೂರ ಬಾರ ಕಳಿಸುವುದೆಂದರೆ ಜೀವ ಬಾಯಿಗೆ ಬಂದಂತಾಗುತ್ತದೆ ಎಂದು ರಾಮಚಂದ್ರನಿಗೆ ಗೊತ್ತಿದೆ. ದೊಡ್ಡ ಓದು ಓದಿ ಒಂದು ನೌಕರಿ ಹುಡುಕಿಕೊಂಡರೆ ಚಂದ ಎನ್ನುವ ಆಸೆಯನ್ನೂ ಮೀರಿ ಮಕ್ಕಳು ತನ್ನ ರಕ್ಷಣಾವಲಯದಲ್ಲಿರಲಿ ಎನ್ನುವ ಭಾವ ಅಮ್ಮನ ಮನಸ್ಸಿನಲ್ಲಿ ಮೇಲುಗೈ ಪಡೆದಿರಬಹುದು. ಹೀಗೆ ಗಂಡು ಮಕ್ಕಳಿಬ್ಬರೂ ಮನೆ ಹಿಡಿದು ಕೂತುಕೊಂಡು, ಇರುವ ಆಸ್ತಿ ಭಾಗವಾಗಬೇಕೇ ವಿನಾ ಕೂಡಿಸುವ ಪ್ರಶ್ನೆಯೇ ಇಲ್ಲ ಅಂದುಕೊಂಡಿದ್ದ ಅಮ್ಮನಿಗೆ ಈ ಸಂಬಂಧದ ಪ್ರಸ್ತಾಪವಾಗಿದ್ದು ಹೊಸ ಕನಸುಗಳಿಗೆ ಮುನ್ನುಡಿ ಬರೆದಂತಾಗಿತ್ತು. ಹೆಣ್ಣು ನೋಡಲು ಹೊರಟು ನಿಂತ ಮಗನನ್ನು ಮುಹೂರ್ತ ನೋಡಿಸಿ ಕಳಿಸಿಕೊಟ್ಟಿದ್ದಳು ಅಮ್ಮ. ದೊಡ್ಡ ಮನುಷ್ಯರಂತೆ ಕಾರಿನಲ್ಲೇ ಹೋಗಿ ಬರಬೇಕೆಂಬ ಅಪೇಕ್ಷೆ ಕೂಡಾ ಅವಳದ್ದೇ. ಆಗೆಲ್ಲಾ ಕಾರಿನಲ್ಲಿ ಓಡಾಡುವುದು ಅಂದರೆ ಅದೊಂದು ಪ್ರತಿಷ್ಠೆ, ಗೌರವ.

* * *

ಮನೆಬಾಗಿಲಿಗೆ ಬಂದಿಳಿದವರನ್ನು ವಿಶ್ವಾಸದಿಂದ ಬರಮಾಡಿಕೊಂಡಿದ್ದರು ಶೀನಪ್ಪಯ್ಯ, ನಾಗಶ್ರೀಯ ತಂದೆ.

'ಎಲ್ಲಿದೀಯೇ? ಬಂದ್ರು ಕಣೇ..' ಎನ್ನುವ ಅವರ ರಾಗದ ಕರೆಗೆ ಒಳಗಿದ್ದ ಅವರ ಶ್ರೀಮತಿ ಸೀರೆ ಸೆರಗನ್ನು ಮೈ ತುಂಬಾ ಹೊದ್ದುಕೊಳ್ಳುತ್ತಾ ಹೊರಗೆ ಬಂದು,

'ಬಂದ್ರ್ಯಾ? ಬನ್ನಿ, ಬನ್ನಿ. ಕೈಕಾಲು ತೊಳ್ಕಂಬೇಕಾರೆ ಸೀದಾ ಒಳಗೇ ಬನ್ನಿ..' ಯಾವ ಬಿಗುಮಾನವಿಲ್ಲದ ಸರಳ ಸ್ವಾಗತ. ಅವರ ಕಣ್ಣಲ್ಲಿ ಕಾಣುತ್ತಿದ್ದ ಗಲಿಬಿಲಿ ಕಂಡು ರಾಮಚಂದ್ರನಿಗೆ ಒಳಗೊಳಗೇ ನಗೆ. ಬಂದ ಇಬ್ಬರಲ್ಲಿ ಮದುವೆಗಿರೋ ಹುಡುಗ ಯಾರು? ಎಂದು ಅವರಿಗೆ ಗೊತ್ತಾಗುತ್ತಿಲ್ಲ. ಐತಾಳರು ಪರಿಚಯ ಮಾಡಿಸಿದ್ದರು.

'ಇವನು ಮದುವೆಗಿರೋ ಹುಡುಗ, ರಾಮಚಂದ್ರ. ಇವನು ಅವನಣ್ಣ ರಘುರಾಮ. ಅತ್ತಿಗೆ ಭವಾನಿ..'

ಕಾಲು ತೊಳೆದುಕೊಂಡು ಬರಲು ಒಳಗೆ ಹೋದರೆ ಆ ಹೆಳೆಯಲ್ಲಿ ಮನೆಯೊಳಗೆಲ್ಲೋ ಅವಿತು ಕೂತು ತನ್ನನ್ನು ಗಮನಿಸುತ್ತಿರಬಹುದಾದ ಹುಡುಗಿಯನ್ನು ನೋಡುವ ಅವಕಾಶ ಗಿಟ್ಟಬಹುದೆಂದು ರಾಮಚಂದ್ರನ ಆತುರ. ಆದರೆ ರಘುರಾಮ ಪೆದ್ದಪ್ಪನಂತೆ ಈ ಅವಕಾಶವನ್ನು ಕೈ ಚೆಲ್ಲಿದ.

'ಮನೆ ಬಾಗ್ಲಲ್ಲಿ ಕಾರು ಹತ್ತಿದ್ದು. ನಿಮ್ಮನೆ ಬಾಗ್ಲಲ್ಲಿ ಇಳಿದದ್ದು. ಕಾಲು ತೊಳೀಬೇಕೂಂತೇನಿಲ್ಲ..'

ಮೂರು ಗಂಟೆ ಪ್ರಯಾಣದ ಅಂತರವಿರುವ ಮತ್ತೊಂದು ಹಳ್ಳಿ ಅನ್ನುವುದು ಬಿಟ್ಟರೆ ಅವರ ಮನೆಗೂ, ಇವರ ಮನೆಗೂ ಅಂತಾ ವ್ಯತ್ಯಾಸವೇನಿರಲಿಲ್ಲ. ಅದೇ ತೋಟ ತುಡಿಕೆ, ಬೇಸಾಯ ನಂಬಿಕೊಂಡ ಕೃಷಿಕ ಕುಟುಂಬ. ಅಂತದೇ ಮನೆ. ಉದ್ದಾನುದ್ದದ ಜಗುಲಿ, ಮುಚ್ಚಿಗೆ ಹೊದಿಸಿದ ನಸುಗತ್ತಲಿನ ನಡುಮನೆ, ಆ ಕಡೆ, ಈ ಕಡೆಗೆ ಕೋಣೆಗಳು, ಮೂಲೆಯಲ್ಲಿ ಉಪ್ಪರಿಗೆ ಹತ್ತಲು ಮರದ ಹಲಗೆ ಅಳವಡಿಸಿದ ಮೆಟ್ಟಿಲು, ಎದುರು ಬದುರು ಎರಡು ಪಂಕ್ತಿ ಬಳ್ಳೆ ಹಾಕಿದರೆ ನಡುವೆ ಇಬ್ಬರು ಸಲೀಸಾಗಿ ಓಡಾಡಿಕೊಂಡು ಬಡಿಸಬಹುದಾದ ಊಟದೊಳಗು, ಹೆಚ್ಚೂ ಕಮ್ಮಿ ತಮ್ಮ ಮನೆಯಲ್ಲಿದ್ದಂತೆಯೇ ಇರುವ ಹೊಗೆ ಕುಡಿದು ಕರಿಗಟ್ಟಿದ ಡಬ್ಬಗಳ ಅಡುಗೆ ಮನೆ, ಉಪ್ಪರಿಗೆಯ ಮೇಲೆ ಒಂದು ಹಾಲು. ಒಂದೋ, ಎರಡೋ ಕೋಣೆಗಳು. ಕೂತಲ್ಲೇ ಎಲ್ಲವನ್ನೂ ಅಂದಾಜಿಸಿದ್ದ ರಾಮಚಂದ್ರ. ವ್ಯತ್ಯಾಸ ಅಂದರೆ ಈ ಮನೆಗೆ, ಆಸ್ತಿಪಾಸ್ತಿಗೆ ಒಬ್ಬಳೇ ವಾರಸುದಾರಿಣಿ. ತಮ್ಮ ಮನೆಯಲ್ಲಿ ಇಬ್ಬಿಬ್ಬರು. ಐತಾಳರು, ಅಣ್ಣ ಮನೆಯ ಯಜಮಾನರೊಂದಿಗೆ ಲೋಕಾರೂಢಿಯಾಗಿ ಶುರು ಹಚ್ಚಿಕೊಂಡಿದ್ದ ಮಾತುಕತೆ ಕಿವಿಗಳ ಮೇಲೆ ಬಿದ್ದೂ ಬೀಳದ ತಂದ್ರಿಯಲ್ಲಿ ರಾಮಚಂದ್ರ ಮುಂಚೀಕಡೆಯ ಗೋಡೆಯ ಮೇಲ್ಭಾಗದುದ್ದಕ್ಕೂ ಕೆಳಗೆ ರಿಪೀಸು ಹೊಡೆದು ಸಾಲಿಗೆ ಜೋಡಣೆಗೊಂಡಿದ್ದ, ಕಟ್ಟು ಹಾಕಿದ ದೇವರ ಪಟಗಳ ಮೇಲೆ ದಿಟ್ಟಿ ನೆಟ್ಟು ಕೂತಿದ್ದ. ಮೂವತ್ತೂರು ಕೋಟಿ ದೇವಾನುದೇವತೆಗಳೂ ಇಲ್ಲಿ ಜಾಗ ಪಡೆದಿದ್ದಾರೆನ್ನುವ ಉತ್ಪ್ರೇಕ್ಷೆಯ ಅನಿಸಿಕೆಯಿಂದ ನಗೆ ಬಂದಿತ್ತು. ಇವುಗಳ ಧೂಳು ಹೊಡೆದು ಚೊಕ್ಕವಾಗಿಡು ವುದೆಂದರೆ ಹುಡುಗಾಟದ ಮಾತೇನಲ್ಲ. ಬೇರೆ ಸಂದರ್ಭದಲ್ಲಲ್ಲದಿದ್ದರೂ ಗದ್ದೆಯಿಂದ ತಂದ ಕೆಯ್ ಹುಲ್ಲನ್ನು ಅಂಗಳ ತುಂಬಾ ಹರಡಿ, ಟಿಲ್ಲರೋ, ಟ್ರ್ಯಾಕ್ಟರೋ ಓಡಿಸುತ್ತಾ ಭತ್ತ ಒಕ್ಕುವಾಗ ಮುಂಚೀಕಡೆಯಲ್ಲಿರುತ್ತಿದ್ದ ಸಮಸ್ತ ವಸ್ತುಗಳೂ ಧೂಳಿನಲ್ಲಿ ಅದ್ದಿಟ್ಟಂತಾಗುವುದು ರಾಮಚಂದ್ರನ ಅನುಭವ. ಇವರು ಮನೆಬಾಗಿಲಲ್ಲಿ ವಕ್ಕಣೆ ಮಾಡುತ್ತಾರೋ, ಗದ್ದೆಯ ಬದಿಯಲ್ಲೇ ಜಾಗ ಮಾಡಿಕೊಂಡಿದ್ದಾರೋ ಗೊತ್ತಿಲ್ಲ ಇವನಿಗೆ. ಒಟ್ಟಿನಲ್ಲಿ ಪಟದ ಗಾಜುಗಳು ತೀರಾ ಕೊಳೆ ಕೂರದೆ ಚೊಕ್ಕಟವಾಗಿದ್ದುವು. ವಾಸ್ತುಬಾಗಿಲಲ್ಲಿ ಬಣ್ಣಬಣ್ಣದ ಮಣಿಗಳನ್ನು ನವಿಲಿನಾಕಾರದಲ್ಲಿ ಹೆಣೆದು ಮಾಡಿದ ತೋರಣ. ಆಚೆಗೊಂದು ನವಿಲು, ಈಚೆಗೊಂದು ನವಿಲು ಮುಖಾಮುಖಿಯಾಗಿ ನಡುವಿನಂತರದಲ್ಲಿ ಹಸ್ತದಗಲದ ಮಣಿಮಾಲೆಯ ನೆಯ್ಗೆ. ರಾಮಚಂದ್ರನ ದೃಷ್ಟಿ ಅದರ ಮೇಲಿದ್ದುದನ್ನು ಗೊತ್ತು ಮಾಡಿಕೊಂಡವರಂತೆ ಹೇಳಿದ್ದರು ಶೀನಪ್ಪಯ್ಯ,

'ನಮ್ಮ ನಾಗಶ್ರೀನೇ ಮಾಡಿರೋದು. ಹಿಂಗಿದ್ದು ಬೇಕಾದಷ್ಟು ಕೈಕಸುಬು ಮಾಡಿದಾಳೆ. ಇಂತದ್ದೆಲ್ಲಾ ಮಾಡೋದು ಅಂದ್ರೆ ಅವಳಿಗೆ ಭಾರೀ ಆಯ್ತು..'

ಉಳಿದವರ ದೃಷ್ಟಿಯೂ ನಾಗಶ್ರೀಯ ಕಲಾಕುಸುರಿಯ ಮೇಲೆ ಹೊರಳಿ ಐತಾಳರು ಹೇಳಿದ್ದರು,

'ಮತ್ತೆ? ಯಾವುದ್ರಲ್ಲೂ ಬೆಟ್ಟು ಮಡಚೋ ಹಾಗಿಲ್ಲ. ಹುಡುಗಿ ಭಾರೀ ಜಾಣೆ..'

ಭಾರೀ ಜಾಣೆ ಹುಡುಗಿಯನ್ನು ಮುಖತಃ ನೋಡಲು ಒಳಗಿನಿಂದ ತಿಂಡಿಗೆ ಬಳ್ಳೆ ಹಾಕಿದ ಕರೆ ಬರುವವರೆಗೆ ಕಾಯಬೇಕಾಯ್ತು. ಮಾಮೂಲಿನ ಉಪ್ಪಿಟ್ಟು, ಕೇಸರೀಬಾತೇ ಆಗಿದ್ದರೂ ಬಸಿದು ಹೋಗುವಷ್ಟು ತುಪ್ಪ ಸುರಿದು, ತಿಂದ ಮೇಲೆ ಸೋಪು ಹಾಕಿ ಬಿಸಿನೀರಲ್ಲಿ ಕೈ ತೊಳೆದುಕೊಳ್ಳದಿದ್ದರೆ ಕೈಗೆ ಮೆತ್ತಿದ ಜಿಡ್ಡು ಹೋಗುವಂತಿಲ್ಲ ಅನ್ನುವಂತಿತ್ತು. ಎಲ್ಲರೂ ತಿಂಡಿ ತಿನ್ನುತ್ತಿರುವಾಗ ಶೀನಪ್ಪಯ್ಯ ಎತ್ತರಿಸಿದ ಗಂಟಲಲ್ಲಿ ಕರೆದಿದ್ದರು,

'ಮಗೂ, ಎಲ್ಲಿದೀಯೇ? ಕಾಫಿ ತಗಂಬಾ ನೋಡಣ..'

ಮೈಯ ರಕ್ತವೆಲ್ಲಾ ಏಕಾಏಕಿ ಬಿಸಿಯೇರಿ, ಕೈಲಿದ್ದ ತುತ್ತನ್ನು ಬಾಯಿಗಿಡಲು ಮರೆತಂತಾಗಿ, ರಾಮಚಂದ್ರನ ಮುಕ ಕೆಂಪಗಾಗಿತ್ತು. ಕಾಲ್ಗೆಜ್ಜೆಯ ಹಿತವಾದ ಸದ್ದು ಕಿವಿಗಳ ಮೇಲೆ ಬೀಳುತ್ತಿದ್ದರೂ ತಲೆಯೆತ್ತಿ ನೋಡಲಾಗದ ಮುಜುಗರ.

## ಮಕ್ಕಳು

ತಂದೆ ಕಾಯಿಲೆ ಬಿದ್ದರೆ
ಕೆಲವು ಮಕ್ಕಳು
ವೈದ್ಯರನ್ನು ಕರೆಸುತ್ತಾರೆ
ಇನ್ನೂ ಕೆಲವರು
ವಕೀಲರನ್ನು ಕರೆಸುತ್ತಾರೆ.

★ ವಿ.ಹೇಮಂತ ಕುಮಾರ್



ಈಶ್ವರ